ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಎರಡು ವರ್ಷಗಳಿಂದ ಅಲ್ಲಿ ಟ್ರೈನಿಂಗ್ ಕೊಡತಕ್ಕ ಕಾರ್ಯಕ್ರಮವನ್ನು ನಿಲ್ಲಿಸಿದೆ. ಮೂಲ ಶಿಕ್ಷಣವನ್ನು ಕೊಡತಕ್ಕಂಥಾ ಶಾಲೆಗಳು ಈಗ ಇಲ್ಲ. ಟೀಚರುಗಳಿಗೆ ಕೊಡತಕ್ಕಂಥಾ ಟ್ರೈನಿಂಗಿಗೆ ಮೂಲ ಶಿಕ್ಷಣ ಎಂದೂ ಹೇಳುತ್ತಾರೆ. ಅಲ್ಲಿ ಮತ್ತೆ ಈಗ ನೂ ಸರ್ವೀಸ್ ಟೀಚರ್ಸ್ ಟ್ರೈನಿಂಗ್ ಕಾರ್ಯಕ್ರಮ ಇರುವುದರಿಂದ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆ ಕೈಗಾರಿಕೋದ್ಯಮದಲ್ಲಿ ಹಿಂದುಳಿದಿರುವುದು.

೭೫೨. ಶ್ರೀ ವಿ.ವಿ. ವಾಯಿ (ಶಿರಹಟ್ಟಿ) ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಧಾರವಾಡ ಜಿಲ್ಲೆಯು ಕೈಗಾರಿಕೋದ್ಯಮದಲ್ಲಿ ಹಿಂದುಳಿದ ಜಿಲ್ಲೆಯಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಆ) ಅದರಲ್ಲಿ ಶಿರಹಟ್ಟಿ ತಾಲ್ಲೂಕ ಹಳೆ ಸ್ಟೇಟುಗಳ ಹಳ್ಳಿಗಳ ತಾಲೂಕು ಇದ್ದ ಎಲ್ಲಾ ತಾಲೂಕುಗಳಿಗಿಂತ ಹಿಂದುಳಿದಿದೆಯೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ :

(ಇ) ತಾಲೂಕಿನ ಕೈಗಾರಿಕಾ ಸರ್ವೆ ಆಗಿದೆಯೇ :

(ಈ) ಆಗಿದ್ದರೆ ಅಲ್ಲಿ ಯಾವ ಯಾವ ಕಚ್ಚಾವಸ್ತುಗಳು ಕೈಗಾರಿಕೆಗೆ ಯೋಗ್ಯವಾಗಿವೆ ಎಂಬುದು ತಿಳಿದು ಬಂದಿದೆಯೇ ;

(ಉ) ಈ ತಾಲೂಕಿನ ಪರಿಸ್ಥಿತಿಗೆ ಅನುಸರಿಸಿ ಯಾವ ಕೈಗಾರಿಕೆ ಸ್ಥಾಪಿಸುವುದಕ್ಕೆ ಅನುಕೂಲವಿದೆ ಎಂಬುದರ ಬಗ್ಗೆ ಸರಕಾರ ಜನತೆಗೆ ಮಾರ್ಗದರ್ಶನ ಮಾಡುವುದೇ ;

(ಊ) ಶಿರಹಟ್ಟಿ ತಾಲೂಕಿದಲ್ಲಿ ಮಜೂರಲ್ಲಿ ಬಿಳಿಯ ಮಣ್ಣು (ಚೈನಾಕ್ಲೆ) ಮತ್ತು ಬೆಳ ಫಟ್ಟಿಯಲ್ಲಿ ಮೆತ್ತನೆಯ ಕಲ್ಲು (ಅದರಿಂದ ಕಲ್ಲಿನ ಪಾತ್ರೆಗಳನ್ನು ಮಾಡುವರು) ಅದರಿಂದ ಯಾವುದಾದರೂ ಕೈಗಾರಿಕೆಗೆ ಸಾಧ್ಯವಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಋ) ಹಾಗಿದ್ದರೆ ಆ ಬಗ್ಗೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವರೇ ;

ಶ್ರೀ ಎಸ್.ಎಂ. ಕೃಷ್ಣ (ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು).—

(ಅ) ಸರಕಾರದ ಆದೇಶದಂತೆ ರಾಜ್ಯದಲ್ಲಿನ ೧೫ ಜಿಲ್ಲೆಗಳ ಪೈಕಿ ಧಾರವಾಡ ಜಿಲ್ಲೆಯೂ ಸೇರಿದಂತೆ ೧೧ ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸಲಾಗಿದೆ. ಧಾರವಾಡ ಜಿಲೆ ಯನ್ನು ಬಹಳ ಹಿಂದುಳಿದ ಕೈಗಾರಿಕಾ ಪ್ರದೇಶವೆಂದು ಕೇಂದ್ರ ಸರಕಾರವು ಘೋಷಿಸಿದೆ ;

(ಆ) ಇಡೀ ಧಾರವಾಡ ಜಿಲ್ಲೆಯನ್ನು ಬಹಳ ಹಿಂದುಳಿದ ಕೈಗಾರಿಕಾ ಪ್ರದೇಶವೆಂದು ಘೋಷಿಸಿರುವುದರಿಂದ, ಶಿರಹಟ್ಟಿ ತಾಲ್ಲೂಕನ್ನು ಪತ್ಯೇಕವಾಗಿ ಘೋಷಿಸುವ ಅವಶ್ಯಕತೆ ಇರುವುದಿಲ್ಲ ;

(ಇ) ಇಡೀ ಜಿಲ್ಲೆಯು ಸಮೀಕ್ಷೆಗೆ ಒಳಪಟ್ಟಿರುವುದರಿಂದ ಶಿರಹಟ್ಟಿ ತಾಲ್ಲೂಕಿಗಾಗಿಯೇ ಪತ್ಯೇಕ ಸಮೀಕ್ಷೆ ಮಾಡುವ ಅವಶ್ಯಕತೆ ಉದ್ಭವಿಸುವುದಿಲ್ಲ ;

(ಈ) ಜಿಲ್ಲಾ ಸಮೀಕ್ಷೆ ವರದಿಯಂತೆ ಶಿರಹಟ್ಟಿ ತಾಲ್ಲೂಕಿನ ಮಜ್ಜೂರು ಗ್ರಾಮದಲ್ಲಿ ಚೈನಾಕ್ಲೆ (ಜೇಡಿಮಣ್ಣು) ದೊರೆಯುವುದರಿಂದ ಈ ಕಚ್ಚಾ ಮಾಲನ್ನು ಅವಲಂಭಿಸಿದ ಕೈಗಾರಿಕಾ ಘಟಕದ ಸ್ಥಾಪನೆಗೆ ಅವಕಾಶವಿದೆ ಎಂದು ತಿಳಿದು ಬಂದಿದೆ ;

(ಉ) ಧಾರವಾಡ ಜಿಲ್ಲಾ ಗ್ರಾಮೀಣ ಕೈಗಾರಿಕಾ ಯೋಜನಾ ಅಧಿಕಾರಿಯು ತಯಾರಿಸಿರುವ ಸಮೀಕ್ಷೆಯಲ್ಲಿ ಶಿರಹಟ್ಟಿ ತಾಲ್ಲೂಕಿನ ಮಜ್ಜೂರ ಗ್ರಾಮದ ಸುತ್ತ ಮುತ್ತಲಿನ ಪ್ರದೇಶದಲ್ಲಿ ದೊರಕುವ ಚೈನಾಕ್ಲೆಯನ್ನು (ಜೇಡಿಮಣ್ಣು) ಕಚ್ಚಾ ಮಾಲಾಗಿ ಉಪಯೋಗಿಸಿ ಕೊಂಡು ಪಿಂಗಾಣಿ ಸಾಮಾನು ತಯಾರಿಸುವ ಘಟಕದ ಸ್ಥಾಪನೆಗೆ ಅವಕಾಶವಿದೆ ಎಂದು ತಿಳಿಯಪಡಿಸಲಾಗಿದೆ.

(ಊ) ಜಿಲ್ಲಾ ಸಮೀಕ್ಷೆ ವರದಿಯನ್ನು ಶಿರಹಟ್ಟಿ ತಾಲ್ಲೂಕು ಮಜ್ಜೂರ ಗ್ರಾಮದಲ್ಲಿ ಚೈನಾಕ್ಲೆ (ಬಿಳಿಯ ಜೇಡಿಮಣ್ಣು) ಸಿಗುವದೆಂದು ಅದನ್ನು ಉಪಯೋಗಿಸಿ ಪಿಂಗಾಣಿ ಸಾಮಾನುಗಳನ್ನು ತಯಾರು ಮಾಡಬಹುದೆಂದು ವರದಿ ಕಳಿರುವುದು.

ಬೆಳ್ಳಟ್ಟಿಯಲ್ಲಿ ಮೆತ್ತನೆಯ ಕಲ್ಲು ಸಿಗುವ ಬಗ್ಗೆ ವರದಿಯಾಗಿಲ್ಲ.

(ಋ) ಇಲಾಖಾಧಿಕಾರಿಗಳು ಈ ಪ್ರದೇಶದಲ್ಲಿ ಈಗಾಗಲೇ ಸಮೀಕ್ಷೆಯಲ್ಲಿ ನಮೂದಿಸಿರುವ ಮಾಹಿತಿಯ ಬಗ್ಗೆ ಸಾಕಷ್ಟು ಪ್ರಚಾರ ಮಾಡಿರುವರಲ್ಲದೇ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಬರುವ ಅಭ್ಯರ್ಥಿಗಳಿಗೆ ಸರ್ಕಾರದ ಸುತ್ತೋಲೆಯಲ್ಲಿ ಪ್ರಚುರ ಪಡಿಸಿರುವ ಎಲ್ಲಾ ಸವಲತ್ತುಗಳನ್ನು ಕೊಡಲು ತಯಾರಿದ್ದಾರೆ.

ಶ್ರೀ ವಿ. ವಿ. ವಾಯಿ.—ಧಾರವಾಡ ಜಿಲ್ಲೆಯು ಕೈಗಾರಿಕೆಯಲ್ಲಿ ಬಹಳ ಹಿಂದುಳಿದ ಜಿಲ್ಲೆ ಎಂದು ಪರಿಗಣಿಸಲಾಗಿದೆ ಎಂದು ತಾವು ಹೇಳಿದ್ದೀರಿ ಅದರಲ್ಲಿ ಶಿರಹಟ್ಟಿ ತಾಲ್ಲೂಕು ಕೂಡ ಬರುತ್ತದೆ. ಎಂದು ಹೇಳಿದ್ದೀರಿ, ಹಾಗಾದರೆ ಈ ಶಿರಹಟ್ಟಿ ತಾಲ್ಲೂಕು ಮಜೂರು ಗ್ರಾಮದಲ್ಲಿ ಚೈನಾಕ್ಲೆ ದೊರೆಯುವುದರಿಂದ ಅದನ್ನು ಗೊಬ್ಬರದ ಕಾರ್ಖಾನೆಗೆ ಈಗಾಗಲೇ ಕಳುಸುತ್ತಿದ್ದಾರೆ. ಆದ್ದರಿಂದ ಅಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದೀರಾ ?

† ಶ್ರೀ ಎಸ್. ಎಂ. ಕೃಷ್ಣ.—ಸಣ್ಣ ಕೈಗಾರಿಕೆಗಳನ್ನು ಮಾಡತಕ್ಕ ನೀತಿಯನ್ನು ನಾವು ಹಾಕಿ ಕೊಂಡಿಲ್ಲ. ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರತಕ್ಕ ಲೋಕಲ್ ಜನಗಳಿಗೆ ಏನು ಉತ್ತೇಜನ ಕೊಡಬೇಕೋ ಅವುಗಳನ್ನು ಕೊಡಬೇಕು ಎನ್ನತಕ್ಕಂಥಾದ್ದು ಸರ್ಕಾರದ ಉದ್ದೇಶ. ಶಿರಹಟ್ಟಿ ತಾಲ್ಲೂಕಿನಲ್ಲಿ ಸಿಕ್ಕತಕ್ಕ ಚೈನಾಕ್ಲೆ ಆಧಾರಿತವಾದ ಯಾವುದಾದರೂ ಕೈಗಾರಿಕೆಯನ್ನು ಮಾಡ ಬೇಕು ಎನ್ನತಕ್ಕಂಥಾ ಆಪೇಕ್ಷೆ ಮಾನ್ಯ ಸದಸ್ಯರಿಗೆ ಇದ್ದರೆ ಆ ಕೈಗಾರಿಕೆಯನ್ನು ಮಾಡತಕ್ಕವರನ್ನು ಕರೆದು ಕೊಂಡು ಬಂದರೆ ಅವರಿಗೆ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಕೊಡುತ್ತೇವೆ.

ಶ್ರೀ ವಿ. ವಿ ವಾಯಿ.—ಬೆಳಗಟ್ಟಿಯಲ್ಲಿ ಸಾಫ್ಟ್ ಕಲ್ಲು ಸಿಕ್ಕುತ್ತದೆ. ಅದನ್ನು ಉಪಯೋಗಿಸಿ ಕೊಂಡು ಒಂದು ಕೈಗಾರಿಕೆಯನ್ನು ಪ್ರಾರಂಭಿಸಬೇಕೆಂದು ಅಲ್ಲಿ ಕೆಲವು ಜನಗಳು ಒಂದು ಸೊಸೈಟಿಯನ್ನು ಸ್ಥಾಪನೆ ಮಾಡಿದ್ದಾರೆ. ಆದಕ್ಕೆ ಸರ್ಕಾರದ ಯಾವ ರೀತಿಯ ಪ್ರೋತ್ಸಾಹವೂ ಸಿಕ್ಕಿಲ್ಲ. ಅದನ್ನು ಪರಿಶೀಲನೆ ಮಾಡಿ ಅದಕ್ಕೆ ಪ್ರೋತ್ಸಾಹ ಕೊಡತಕ್ಕ ವಿಚಾರ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ಪರಿಶೀಲನೆ ಮಾಡುತ್ತೇನೆ. ಈಗ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲವಾಗಲೇ ಎನ್ನುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಒಂದು ಕನ್‌ಸೆಲ್ಟೆನ್ಸಿ ಸೆಲ್ ಮಾಡಬೇಕು ಎಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ ಆದಕ್ಕೆ ಈಗಾಗಲೇ ಒಬ್ಬ ಚೀಫ್ ಆಡ್ವೈಜರ್ ನೇಮಕ ಮಾಡಿದ್ದೇವೆ. ಕನ್‌ಸಲ್‌ಟೆನ್ಸಿ ಸೆಲ್‌ನವರು ವ್ಯಾಪಕವಾದ ಪ್ರಯತ್ನ ಮಾಡಿ ಯಾವ ಯಾವ ಜಿಲ್ಲೆಯಲ್ಲಿ ಯಾವ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲ ಇದೆಯೋ ಮತ್ತು ಅಲ್ಲಿ ದೊರೆಯತಕ್ಕ ರಾಮೆಟೀರಿಯಲ್ಸ್ ಆಧಾರದ ಮೇಲೆ ಪ್ರಾಜೆಕ್ಟ್ ಪ್ರೊಫೈಲ್ಸ್ ಮತ್ತು ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ ಅವುಗಳನ್ನು ಹಂಚುತ್ತೇವೆ.

ಶಿರಹಟ್ಟಿ ತಾಲ್ಲೂಕಿನಲ್ಲಿ ಕುರಿಗಳ ಕ್ಷೇತ್ರ

೭೫೩. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ವ್ಯವಸಾಯ ಹಾಗೂ ಪಶು ಸಂಗೋಪನ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಶಿರಹಟ್ಟಿ ತಾಲ್ಲೂಕದಲ್ಲಿ ಕುರುಬರ ಸಂಖ್ಯೆ ಎಷ್ಟು;

(ಆ) ತಾಲ್ಲೂಕದಲ್ಲಿ ಪುರಾತನದಿಂದ ಕುರಿಗಳನ್ನೇ ಸಾಕುತ್ತ ಬಂದಿರುವುದು ಅವುಗಳಲ್ಲಿ ಸುದಾರಣೆ ಇಲ್ಲದಿರುವುದು ಸರಕಾರಕ್ಕೆ ವಿದಿತವಾಗಿದೆಯೇ,

(೫) ತಾಲ್ಲೂಕದಲ್ಲಿ ನೀರಿನ ಮತ್ತು ಆಡವಿಯ ಸೌಕರ್ಯವಿದ್ದು ಉತ್ತಮ ತಳಿಯ ಕುರಿಗಳನ್ನೇ ಸರಕಾರ ಪೂರೈಸಿ ಉಣ್ಣೆಯ ಮಟ್ಟಿ ಬೆಳೆಯುವಂತೆ ಸಹಾಯ ಮಾಡುವರೇ;